# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1132 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 23/02/2024 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

************

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರದ ಯುವನಿಧಿ ಯೋಜನೆಯನ್ನು ಯಾವ ದಿನಾಂಕದಿಂದ ಜಾರಿ ಮಾಡಲಾಗಿದೆ; ಸದರಿ ಯೋಜನೆಯ ಪ್ರೋತ್ಸಾಹ ನಿಧಿಗಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; | ರಾಜ್ಯ ಸರ್ಕಾರದ ಯುವನಿಧಿ ಯೋಜನೆಯನ್ನು ದಿನಾಂಕ: 26/12/2023ರಿಂದ ಜಾರಿ ಮಾಡಲಾಗಿದೆ. ಸದರಿ ಯೋಜನೆಯಡಿ ದಿನಾಂಕ: 17/02/2024ರವರೆಗೆ 131199 ಅರ್ಜಿಗಳು ಸ್ವೀಕೃತವಾಗಿವೆ. |
| (ಆ) | ಇಲ್ಲಿಯವರೆಗೆ ಎಷ್ಟು ಜನ ನಿರುದ್ಯೋಗಿಗಳಿಗೆ ಯುವನಿಧಿ ಪ್ರೋತ್ಸಾಹ ನಿಧಿ ನೀಡಲಾಗಿದೆ; | ಇಲ್ಲಿಯವರೆಗೆ 22650 ನಿರುದ್ಯೋಗಿಗಳಿಗೆ ಯುವನಿಧಿ ಪ್ರೋತ್ಸಾಹ ಧನ ನೀಡಲಾಗಿದೆ. |
| ಇ) | ರಾಜ್ಯ ಸರ್ಕಾರ ಪದವೀಧರರ ಮತ್ತು ಡಿಪ್ಲೋಮ ನಿರುದ್ಯೋಗಿಗಳೆಲ್ಲರಿಗೂ ಸಮಾನವಾಗಿ 3000 ರೂಗಳ ಪ್ರೋತ್ಸಾಹ ನಿಧಿ ನೀಡದೆ ತಾರತಮ್ಯ ಮಾಡಿರುವುದು ಸರಿಯೇ; ಎಲ್ಲರಿಗೂ ಸಮಾನವಾಗಿ 3000 ರೂಗಳ ಪ್ರೋತ್ಸಾಹ ಧನ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಸಮಾನವಾಗಿ ಪ್ರೋತ್ಸಾಹ ಧನ ನೀಡಲಾಗುವುದು; | ಪದವೀಧರರಿಗೆ ಮಾಸಿಕ ರೂ 3,000/– ಮತ್ತು ಡಿಪ್ಲೋಮಾ ಹೊಂದಿರುವವರಿಗೆ ಮಾಸಿಕ ರೂ. 1500/–ಗಳ ನಿರುದ್ಯೋಗ ಭತ್ಯೆ ನೀಡುವ ಯುವನಿಧಿ ಯೋಜನೆಯು 2023–24ನೇ ಸಾಲಿನ ಆಯವ್ಯಯ ಘೋಷಣೆಯಾಗಿದ್ದು, ಎಲ್ಲರಿಗೂ ಸಮಾನವಾಗಿ 3000 ರೂಗಳ ಪ್ರೋತ್ಸಾಹ ಧನ ನೀಡುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ. |
| ಈ) | ಅರ್ಜಿ ಸಲ್ಲಿಸುವ ಸಮಯದಲ್ಲಿ ನಿರುದ್ಯೋಗಿಯಾಗಿದ್ದು, ಒಂದು ವರ್ಷ ಯುವನಿಧಿ ಪ್ರೋತ್ಸಾಹ ಧನ ಪಡೆದು ನಂತರ ಉನ್ನತ ವ್ಯಾಸಂಗಕ್ಕೆ ತೆರಳಿದಲ್ಲಿ ಅಥವಾ ದೂರ ಶಿಕ್ಷಣ / ಅಂಚೆ ತೆರಪಿನ ಶಿಕ್ಷಣದ ಮೂಲ ಉನ್ನತ ವಿದ್ಯಾಭ್ಯಾಸ ಮಾಡುತ್ತಿದ್ದಲ್ಲಿ ಅವರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ನಿಲ್ಲಿಸಲಾಗುವುದೇ? | ಹೌದು. |

**ಸಂಖ್ಯೆ: ಕೌಉಜೀಇ 09 ಕೈತಪ್ರ 2024**

**(ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.